# ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.

**ಎಸ್.ಸಿ.ನಂ. 107/2016**

**ಸಿ.ಡಬ್ಲ್ಯೂ-9 ಪಿ.ಡಬ್ಲ್ಯೂ- 16**

**ದಿಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ರೂಪಾ @ ಪೂಜಾ ಅಪ್ಪಣ್ಣಾ ಕೋಷ್ಠಿ. |
| ವಯಸ್ಸು | : | 31 ವರ್ಷ. |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | : | ಕಮತೇನಟ್ಟಿ |

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ಚಾ.ಸಾ.1, 7, 8, 10 ರಿಂದ 12 ಗೊತ್ತು. ಚಾ.ಸಾ.13 ಅಪ್ಪಣ್ಣಾ ನನ್ನ ಗಂಡ. ಆರೋಪಿತರು ಗೊತ್ತು.

2) ಮೃತ ಬಾಳಕೃಷ್ಣ ನನ್ನ ಮಾವ. ಆತ ಸುಮಾರು 10 ವರ್ಷಗಳ ಹಿಂದೆ ಮೃತಪಟ್ಟಿದ್ದಾನೆ. ಹೇಗೆ, ಎಲ್ಲಿ ಮತ್ತು ಯಾವ ಕಾರಣಕ್ಕೆ ಮೃತಪಟ್ಟಿದ್ದಾನೆ ಅಂತಾ ಗೊತ್ತಿಲ್ಲ. ಆರೋಪಿತರು ಆತನಿಗೆ ಬಡಿದು ಕೊಲೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಆ ಕುರಿತು ಯಾವುದೇ ಘಟನೆ ನೋಡಿಲ್ಲ ಹಾಗೂ ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಮ್ಮ ಮತ್ತು ಆರೋಪಿತರ ಮನೆಗಳು ಆಜುಬಾಜು ಇವೆ ಎಂದರೆ ಸರಿ. ಚಾ.ಸಾ.1 ಮಂಜುನಾಥ ಚಾ.ಸಾ.7 ಸರಳಾ ಇವರ ಮಗ ಎಂದರೆ ಸರಿ. ಸರಳಾರವರ ಗಂಡ ತೀರಿಕೊಂಡಿದ್ದರಿಂದ ಮಂಜುನಾಥ ಬಾಳಕೃಷ್ಣ ರವರ ಮನೆಯಲ್ಲಿದ್ದ ಎಂದರೆ ಸರಿ.

2) ದಿನಾಂಕಃ 30.12.2014 ರಂದು ಸಂಜೆ 06.30 ಗಂಟೆ ಸುಮಾರಿಗೆ ಬಾಳಕೃಷ್ಣ ಇವರ ಮನೆಯ ಹಿಂದಿನ ಬಾಜು ಮಂಜುನಾಥ ಜೇನು ಬಿಡಿಸುತ್ತಿದ್ದಾಗ, ಶ್ವೇತಾ ಮೂರ್ತ ವಿಸರ್ಜನೆಗೆ ಹೋಗಿದ್ದನ್ನು ಆತ ನೋಡಿದ್ದರಿಂದ, ಶ್ವೇತಾಳ ಗಂಡ ಹಾಗೂ ಆತನ ಸಂಬಂಧಿಕರು ಮಂಜುನಾಥನ ಜೊತೆ ಜಗಳ ಮಾಡಿದ್ದರು ಎಂದರೆ ಸರಿಯಲ್ಲ.

3) ದಿನಾಂಕಃ 31.12.2014 ರಂದು ಬೆಳಗಿನ ಜಾವ 10.30 ಗಂಟೆ ಸುಮಾರಿಗೆ ನಾನು ಮತ್ತು ನನ್ನ ಗಂಡ ಮನೆ ಹತ್ತಿರ ಇದ್ದಾಗ 2 ಮತ್ತು 5ನೇ ಆರೋಪಿತರು ಮೃತ ಬಾಳಕೃಷ್ಣನ ಮನೆ ಹಿಂದಿನಿಂದ ಹಾಯ್ದುು

ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆಗ ಬಾಳಕೃಷ್ಣ ಹಾಗೂ ಚಾ.ಸಾ.10 ರಿಂದ 12 ರವರು ಸದರಿ ಆರೋಪಿತರನ್ನು ತಡೆ ಹಿಡಿದು ಏಕೆ ಮಂಜುನಾಥನ ಜೊತೆ ಜಗಳ ಮಾಡಿದ್ದೀರಿ ಅಂತಾ ಕೇಳುತ್ತಿದ್ದರು ಎಂದರೆ ಸರಿಯಲ್ಲ. ಆಗ ಎಲ್ಲ ಆರೋಪಿತರು ಮಕ್ಕಳಿರಾ ಅದನೇನು ಕೇಳುತ್ತೀರಿ ಅಂತಾ ಹೇಳಿ ನನಗೀಗ ತೋರಿಸಿದ ಮು.ಮಾ.1 ರಿಂದ 9 ನೇದ್ದವುಗಳಿಂದ ಬಾಳಕೃಷ್ಣನ ತಲೆಗೆ, ಚಾ.ಸಾ.7, 8, 10 ರಿಂದ 13 ರವರಿಗೆ ಮೈಕೈಗೆ , ತಲೆಗೆ ಹೊಡೆಬಡೆ ಮಾಡಿದರು ಎಂದರೆ ಸರಿಯಲ್ಲ. ಆಗ ಬಾಳಕೃಷ್ಣ ತೀವ್ರ ಗಾಯಗೊಂಡು ಕೆಳಗೆ ಬಿದ್ದು ಒಡ್ಡಾಡುತ್ತಿದ್ದ ಎಂದರೆ ಸರಿಯಲ್ಲ. ನಂತರ ಆರೋಪಿತರು ಕಲ್ಲು ಒಗೆದು ಹೋದರು ಎಂದರೆ ಸರಿಯಲ್ಲ. ಅದಾದ ಮೇಲೆ ಬಾಳಕೃಷ್ಣ ಹಾಗೂ ಗಾಯಾಳುಗಳು  ಲೆಕ ವಿವ್ ಆಸ್ಪತ್ರೆಗೆ ಹೋಗಿ ದಾಖಲಾಗಿ ಚಿಕಿತ್ಸೆ ಪಡೆದರು ಎಂದರೆ ಸರಿಯಲ್ಲ.

4) ಸದರಿ ವಿಚಾರವಾಗಿ ದಿನಾಂಕಃ 31.12.2014 ರಂದು ನನಗೀಗ ವಿವರವಾಗಿ ಓದಿ ಹೇಳಲಾದ "ನಿನ್ನೆಯ ದಿವಸ ................ ಗೊತ್ತಾಯಿತು" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.28 ಎಂದು ಗುರುತಿಸಲಾಯಿತು.

5) ನಂತರ ದಿನಾಂಕಃ 12.01.2015 ರಂದು ನಾನು ಮತ್ತೇ ಠಾಣೆಗೆ ಹಾಜರಾಗಿ ಆರೋಪಿತರು ಬಡಿದಿದ್ದರಿಂದ ಬಾಳಕೃಷ್ಣ ಮೃತಪಟ್ಟಿದ್ದಾನೆ ಅಂತಾ

ಗೊತ್ತಾಗಿ ನನಗೀಗ ವಿವರವಾಗಿ ಓದಿ ಹೇಳಲಾದ "ಈಗ ತಾವು ................ ಗೊತ್ತಾಯಿತು" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.29 ಎಂದು ಗುರುತಿಸಲಾಯಿತು.

6) ಸದರಿ ಎಲ್ಲ ವಿಚಾರ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿ ಪರ:- ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.